4	ಶಿರಹಟ್ಟಿ ತಲ್ಲೂಕು		
೭	ಲಕ್ಷ್ಮೀಶ್ವರ	ನೆಲಗಡಲೆ (ಶೇಂಗಾ) (ನೀರಾವರಿ)	೫೬೧
೮	ಶಿರಹಟ್ಟಿ	ನೆಲಗಡಲೆ (ಶೇಂಗಾ) (ನೀರಾವರಿ)	೫೧೭
		ಭತ್ತ (ನೀರಾವರಿ)	೨೮೭೫

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೧೭೬೪

ಸದಸ್ಯರ ಹೆಸರು ಶ್ರೀ ಪಾಟೀಲ್ ಎಸ್ ಎಸ್ (ಮುಂಡರಗಿ)

ಉತ್ತರಿಸುವ ಸಚಿವರು ಶ್ರೀ ಹೆಚ್ ಕೆ ಕುಮಾರಸ್ವಾಮಿ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಮುಂಡರಗಿಯ ಬಾಲಭವನ ಕಾಮಗಾರಿ ಯಾವ ವರ್ಷ ಪ್ರಾರಂಭವಾಗಿದೆ, ಇಲ್ಲಕಿಯ ವರೆಗೆ ಮುಗಿಯದಿರಲು ಕಾರಣಗಳೇನು (ವಿವರ ನೀಡಲುವುದು)	ಮುಂಡರಗಿ ತಾಲ್ಲೂಕು ಬಾಲಭವನ ಕಾಮಗಾರಿಯನ್ನು ದಿನಾಂಕ ೫-೧೨-೦೧ರಲ್ಲಿ ಪ್ರಾರಂಭಿಸಲಾಗಿದ್ದು, ಇದರ ಅಂದಾಜು ವೆಚ್ಚ ರೂ ೮೭೩ ಲಕ್ಷಗಳಾಗಿರುತ್ತದೆ ಇದರಲ್ಲಿ ಶೇಕಡ ೫೦ ರಷ್ಟು (ಅಂದರೆ ರೂ ೪೩೨ ಲಕ್ಷಗಳು) ಬಾಲಭವನ ಸೊಸೈಟಿಯು ಭರಿಸಬೇಕಾಗಿದೆ ದಿನಾಂಕ ೨೦-೦೭-೨೦೦೧ರಂದು ರೂ ೨೦೦ ಲಕ್ಷ ಹಾಗೂ ದಿನಾಂಕ ೦೧-೦೭-೨೦೦೪ ರಂದು ರೂ ೨೦೦ ಲಕ್ಷಗಳನ್ನು ಈಗಾಗಲೇ ಬಿಡುಗಡೆ ಮಾಡಿದೆ ಒಟ್ಟಿನಲ್ಲಿ

		ಇದುವರೆವಿಗೂ ಸದರಿ ಬಾಲ ಭವನಕ್ಕೆ ಈ ಕೆಳಕಂಡ ರೀತಿಯಲ್ಲಿ ಅನುದಾನ ಬಿಡುಗಡೆ ಮಾಡಲಾಗಿದೆ ೧ ಬಾಲಭವನ ಸೊಸೈಟಿ ಬೆಂಗಳೂರುವತಿಯಿಮದ ರೂ ೪೦೦ ಲಕ್ಷ ೨ ಶಾಸಕರ ಅನುದಾನದಿಂದ ಬಿಡುಗಡೆ ರೂ ೨೦೦ ಲಕ್ಷ ಒಟ್ಟು ರೂ ೬೦೦ ಲಕ್ಷ ಉಳಿದ ಅನುದಾನವನ್ನು ಸ್ಥಳೀಯ ಸಂಪನ್ಮೂಲಗಳಿಂದ ಕ್ರೋಡೀಕರಿಸಿ ಕಾಮಗಾರಿಯನ್ನು ಪೂರ್ಣಗೊಳಿಸಲು ತಾಲ್ಲೂಕು ಮಟ್ಟದ ಬಾಲಭವನ ಸಮಿತಿಯಲ್ಲಿ ಮಂಡಿಸಿ ಕೂಡಲೇ ಕಾಮಗಾರಿಯನ್ನು ಅಂತಿಮಗೊಳಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಗದಗ ಜಿಲ್ಲೆ ಇವರಿಗೆ ಸೂಚಿಸಲಾಗಿದೆ
ಆ)	ಈ ಬಾಲಭವನ ಕೆಲಸ ಪೂರ್ಣಗೊಳಿಸಿ, ಮಕ್ಕಳಿಗೆ ಎಂದಿನಿಂದ ಅನುಕೂಲ ಕಲ್ಪಿಸಿಕೊಡಲಾಗುವುದು?	ಸದರಿ ಕಟ್ಟಡದ ಕಾಮಗಾರಿಯು ಅಂತಿಮ ಹಂತದಲ್ಲಿದ್ದು ಪ್ಲೋರಿಗಂಗ್, ಪೈಟಂಗ್ ಇತ್ಯಾದಿ ಕಾರ್ಯಗಳು ಆಗಬೇಕಾಗಿದೆ ತಾಲ್ಲೂಕು ಮಟ್ಟದ ಬಾಲಭವನ ಸಮಿತಿಯು ಸ್ಥಳೀಯ ಸಂಪನ್ಮೂಲಗಳನ್ನು ಕ್ರೋಢಿಕರಿಸಿ ಕಾಮಗಾರಿಯನ್ನು

		ಪೂರ್ಣಗೊಳಿಸಿದ ಕೂಡಲೇ ಮಕ್ಕಳ ಉಪಯೋಗಕ್ಕೆ ನೀಡಲಾಗುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೧೭೬೭ (೨೧೩೮)

ಸದಸ್ಯರ ಹೆಸರು ಶ್ರೀ ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ)

ಉತ್ತರಿಸುವ ಸಚಿವರು ಶ್ರೀ ಜಿ ಡಿ ದೇವೇಗೌಡ (ಸಹಕಾರ ಸಚಿವರು)

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ನೇಕಾರರ ಸಾಲದ ಬಡ್ಡಿ ಮನ್ನಾ ಮತ್ತು ಶೇಕಡಾ ದರೆ ಬಡ್ಡಿ ದರದ ಸಾಲ ಯೋಜನೆಗೆ ಸರ್ಕಾರ ನಿಗದಿಪಡಿಸಿದ ಹಣದ ಮೊತ್ತ ಎಷ್ಟು?	೨೦೦೬-೦೭ನೇ ಸಾಲಿನ ನೇಕಾರರ ವಿಶೇಷ ಪ್ಯಾಕೇಜ್ ಯೋಜನೆಯಡಿ ನೇಕಾರರು ಸಹಕಾರಿ ಸಂಸ್ಥೆಗಳಿಂದ ಮತ್ತು ಪಟ್ಟಣ ಸಹಕಾರಿ ಬ್ಯಾಂಕುಗಳಿಂದ ಪಡೆದ ಸಾಲಗಳ ಮೇಲಿನ ಬಡ್ಡಿ ಮತ್ತು ಸಉಸ್ತಿ, ಬಡ್ಡಿ ಮನ್ನಾ ಯೋಜನೆಗೆ ರು ೮೫೦ ೦೦ ಲಕ್ಷಗಳು ಹಆಘೂ ಶೇ ೪ರ ಬಡ್ಡಿ ದರದ ಸಾಲದ ಯೋಜನೆಗೆ ರೂ ೩೦೦ ೦೦ ಲಕ್ಷಗಳ ಆಯವ್ಯಯವನ್ನು ನಿಗದಿಪಡಿಸಲಾಗಿದೆ
ಆ)	ರಾಜ್ಯದಲ್ಲಿ ಖಾದಿಯೇತರ ನೇಕಾರರ (ಅಸಂಘಟಿತ ವಲಯ ಸೇರಿದಂತೆ) ಸಂಖ್ಯೆ ಎಷ್ಟು ? ಅಂದಾಜು	೧೯೯೫-೯೬ನೇ ಸಾಲಿನ ನೇಕಾರರ ಗಣತಿಯಂತೆ ರಾಜ್ಯದಲ್ಲಿ ಕೈಮಗ್ಗ ನೇಕಾರರ ಸಂಖ್ಯೆ ೧,೮೯,೯೩೪ ಮತ್ತು ವಿದ್ಯುತ್ ಮಗ್ಗ ನೇಕಾರರ ಸಂಖ್ಯೆ ೧,೨೭,೫೩೫ ಇರುತ್ತದೆ